# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ : 4** **ಮಾಹೆ : ಸೆಪ್ಟೆಂಬರ್–2021** **ಪ್ರಥಮ ಭಾಷೆ ಕನ್ನಡ**

## ಆರಿಸಿದ ಭಾಗ: ವೀರಮಾತೆ ಜೀಜಾಬಾಯಿ

**(ಪ್ರಮುಖ ಕಲಿಕಾ ಸಾಮರ್ಥ್ಯ: ಸೂಚನೆಗಳನ್ನು ಅನುಸರಿಸಿ ಲೇಖನಚಿಹ್ನೆ ಸಹಿತ ಪರಿಚ್ಛೇದಗಳನ್ನು ಬರೆಯುವ ಸಾಮರ್ಥ್ಯ ಹೊಂದುವರು)**

<table>
<tr><th>ತಿಂಗಳು</th><th>ಕಲಿಕಾ ಸಾಮರ್ಥ್ಯಗಳು</th><th>ಕಲಿಕಾ ಚಟುವಟಿಕೆಗಳು</th><th>ಮೌಲ್ಯಮಾಪನ</th></tr>
<tr><td>ಸೆಪ್ಟೆಂಬರ್ 1ನೇ ವಾರ ಮತ್ತು 2ನೇ ವಾರ</td><td>• ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸಮಾಜ ಸುಧಾರಕರನ್ನು ಗುರ್ತಿಸುವರು.</td><td>ಶಿಕ್ಷಕರು ಮೊಬೈಲ್ ಸಹಾಯದಿಂದ ಅಥವಾ ಚಾರ್ಟ್‌ಗಳನ್ನು ಬಳಸಿ ಸ್ವಾತಂತ್ರ್ಯ ಹೋರಾಟಗಾರರ, ಸಮಾಜ ಸುಧಾರಕರ ಭಾವಚಿತ್ರ ತೋರಿಸಿ ಅವರನ್ನು ಗುರ್ತಿಸಲು ತಿಳಿಸುವರು. ಮಕ್ಕಳು ಅವರ ಹೆಸರನ್ನು ಹೇಳಲು ವಿಫಲವಾದಲ್ಲಿ ಶಿಕ್ಷಕರೇ ಅವರ ಹೆಸರನ್ನು ಹೇಳಿ ಭಾವಚಿತ್ರ ತೋರಿಸಿ ಮನದಟ್ಟು ಮಾಡುವರು.</td><td>• ಮಹಿಳಾ ಹೋರಾಟಗಾರರ, ಸಮಾಜ ಸುಧಾರಕರ ಭಾವಚಿತ್ರ ಸಂಗ್ರಹಿಸುವುದು.</td></tr>
<tr><td></td><td>• ಶಿವಾಜಿಯ ಬಾಲ್ಯದ ಬಗ್ಗೆ ತಿಳಿಯುವರು.</td><td>• ಯು–ಟ್ಯೂಬ್ ಚಾನೆಲ್‌ನಲ್ಲಿ ಬರುವ ಶಿವಾಜಿಯ ಕಥೆಯನ್ನು ಕೇಳಿಸಿ ಅವರ ಬಾಲ್ಯದ ಬಗ್ಗೆ ತಾಯಿ ಜೀಜಾಬಾಯಿಯ ಬಗ್ಗೆ ತಿಳಿಯುವಂತೆ ಸರಳ ಪ್ರಶ್ನೆ ಕೇಳಿ ವಿಷಯವನ್ನು ಮನದಟ್ಟು ಮಾಡುವುದು.</td><td>• ಶಿವಾಜಿಯು ಎಲ್ಲಿ ಹುಟ್ಟಿದರು?<br>• ಶೀವಾಜಿಯ ತಾಯಿಯ ಹೆಸರೇನು?<br>• ಶಿವಾಜಿಯ ಗುರು ಯಾರು?</td></tr>
<tr><td></td><td>• ಲೇಖನ ಚಿಹ್ನೆಗಳ ಬಗ್ಗೆ ತಿಳಿಯುವರು.</td><td><table><tr><td>. ಪೂರ್ಣವಿರಾಮ ಚಿಹ್ನೆ</td><td>, ಅಲ್ಪವಿರಾಮ ಚಿಹ್ನೆ</td><td>? ಪ್ರಶ್ನಾರ್ಥಕ ಚಿಹ್ನೆ</td></tr><tr><td>! ಆಶ್ಚರ್ಯಸೂಚಕ ಚಿಹ್ನೆ</td><td>‘ ’<br>“ ” ಉದ್ಧರಣ ಚಿಹ್ನೆ</td><td></td></tr></table>ಇತ್ಯಾದಿ ಚಿಹ್ನೆಗಳ ಬಗ್ಗೆ ಹಾಗೂ ಅವುಗಳ ಬಳಕೆಯ ಸರಳ ವಿವರಣೆ ನೀಡುವುದು. ಉದಾಹರಣೆ ಸಹಿತ ತಿಳಿಸುವುದು.</td><td>• ಸುಮೇರು ಭಾಗ–2 ಪುಟ 33, 34 ನ್ನು ಬಳಸುವುದು.</td></tr>
<tr><td></td><td>• ಲೇಖನಚಿಹ್ನೆಗಳ ಸಹಿತ ವಾಕ್ಯಗಳನ್ನು ತಿಳಿಯುವರು.</td><td>• ನನ್ನ ಹೆಸರು ಕಮಲ.<br>• ನಿನ್ನ ತಂದೆಯ ಹೆಸರೇನು?<br>• “ಅಯ್ಯೋ! ನನ್ನ ಕಾಲಿಗೆ ಇರುವೆ ಕಚ್ಚಿತು”</td><td>• ಪಠ್ಯಭಾಗದಲ್ಲಿ ಲೇಖನಚಿಹ್ನೆ ಸಹಿತ ವಾಕ್ಯಗಳನ್ನು ಗುರ್ತಿಸಿ ಬರೆದು, ಬಳಕೆಯಾಗಿರುವ ಲೇಖನ ಚಿಹ್ನೆಯನ್ನು ಹೆಸರಿಸಲು ತಿಳಿಸುವುದು.</td></tr>
</table>

| | | | |
|---|---|---|---|
| | • ಮಾದರಿ ವಾಚನವನ್ನು ಆಲಿಸುವರು.<br><br>• ಸೂಕ್ತ ಸ್ವರಭಾರದೊಂದಿಗೆ ಓದುವರು.<br><br>• ಲೇಖನ ಚಿಹ್ನೆಯೊಂದಿಗೆ ಸಂಭಾಷಣೆ / ವಾಕ್ಯ ರಚಿಸುವರು | ಹೀಗೆ ಹಲವಾರು ವಾಕ್ಯಗಳನ್ನು ಬಳಸಿ ಲೇಖನ ಚಿಹ್ನೆಗಳ ಬಗ್ಗೆ ಮನದಟ್ಟು ಮಾಡುವುದು.<br><br>ಶಿಕ್ಷಕರು ಗದ್ಯಭಾಗವನ್ನು ಸೂಕ್ತ ಸ್ವರಭಾರದೊಂದಿಗೆ ಓದುವರು ಹಾಗೂ ಓದುವ ಸಂದರ್ಭದಲ್ಲಿ ಬಳಕೆಯಾಗಿರುವ ಲೇಖನಚಿಹ್ನೆಗಳಿದ್ದಾಗ ಬಳಸುವ ಧ್ವನಿ ವ್ಯತ್ಯಾಸವನ್ನು ಗಮನಿಸಲು ತಿಳಿಸುವುದು.<br><br>• ಮಕ್ಕಳಿಂದ ಪದ್ಯಭಾಗವನ್ನು ವಾಚನ ಮಾಡಿಸುವುದು.<br>• ಪಠ್ಯದ ಸರಳ ವಿವರಣೆಯ ವೀಡಿಯೋ ಯೂ-ಟ್ಯೂಬ್ ಚಾನೆಲ್‌ನಲ್ಲಿ ಲಭ್ಯವಿದ್ದು ಲಿಂಕ್ ಕಳುಹಿಸಿ ಮಕ್ಕಳಿಗೆ ವೀಕ್ಷಣೆ ಮಾಡಲು ತಿಳಿಸಿ ಕೇಳುವ ಪ್ರಶ್ನೆಗೆ ಉತ್ತರಿಸಲು ಪ್ರೋತ್ಸಾಹಿಸುವುದು.<br>• ಶಿಕ್ಷಕರು ಕೆಲವು ಹೊಸಪದಗಳ ಸರಳ ಅರ್ಥದೊಂದಿಗೆ ಕ್ಲಿಷ್ಟ ಕಲ್ಪನೆಯ ಪದಗಳಿಗೆ ಗೂಗಲ್ / ಯೂ-ಟ್ಯೂಬ್ ಸಹಾಯದಿಂದ ಫೋಟೋ ಅಥವಾ ವೀಡಿಯೋ ತೋರಿಸಿ ಅರ್ಥೈಸುವುದು. ಉದಾ: ಪಟ್ಟಾಭಿಷೇಕ, ವಿಜಯೋತ್ಸವ, ಚಾಣಾಕ್ಷ<br><br>• ಪರಿಚಿತ ಸನ್ನಿವೇಶದ ಸಂಭಾಷಣೆ ಬರೆದು ಲೇಖನಚಿಹ್ನೆ ಹಾಕಲು ಪ್ರೋತ್ಸಾಹಿಸುವುದು. | • ಪುಸ್ತಕದಲ್ಲಿರುವ ಅಭ್ಯಾಸದ ಪ್ರಶ್ನೆಗೆ ಉತ್ತರಿಸುವುದು.<br><br>• ಪಠ್ಯಪುಸ್ತಕದ ಭಾಷಾ ಚಟುವಟಿಕೆಯಲ್ಲಿನ ಪದರಚನೆ, ಗಾದೆ ಪೂರ್ಣಗೊಳಿಸಿರುವ ಚಟುವಟಿಕೆ ಮಾಡಿಸುವುದು.<br><br>• ಸುಮೇರು-2, ಪುಟ-38ನ್ನು ಬಳಸಿ<br><br>• ಪ್ರತಿನಿತ್ಯ ನಿನ್ನ ತಾಯಿಯೊಂದಿಗೆ ನಡೆಯುವ ಸಂಭಾಷಣೆಯನ್ನು ಊಹಿಸಿ ಬರೆದು ಲೇಖನ ಚಿಹ್ನೆ ಹಾಕು. |

# ಆರಿಸಿದ ಭಾಗ: ಅಜ್ಜಿಯ ತೋಟದಲ್ಲಿ ಒಂದುದಿನ

| ತಿಂಗಳು | ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|
| ಸೆಪ್ಟೆಂಬರ್ 4ನೇ ವಾರ | • ಒಗಟುಗಳಿಗೆ ಉತ್ತರಿಸುವರು | ಶಿಕ್ಷಕರು ಮಕ್ಕಳಿಗೆ ಕೆಲವು ಒಗಟುಗಳನ್ನು ಕೇಳಿಸಿ ಉತ್ತರಿಸಲು ಪ್ರೋತ್ಸಾಹಿಸುವುದು.<br>ಉದಾ: ಹಸಿರುಗಿಡದಲ್ಲಿ ಮೊಸರು ಚೆಲ್ಲೈತೆ.<br>ಅಡ್ಡ ಮರದಲ್ಲಿ ಬೊಡ್ಡ ಕುಳಿತಾನೆ. | • ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿರುವ ಗಿಡ, ಮರ, ತರಕಾರಿ, ಬೆಳೆಗಳಿಗೆ ಸಂಬಂಧಿಸಿದ ಒಗಟುಗಳನ್ನು ಸಂಗ್ರಹಿಸಲು ತಿಳಿಸುವುದು.<br>• ಸುಮೇರು ಭಾಗ-2ರ ಪುಟ 30, 40, 41, 42ನ್ನು ಬಳಸುವುದು |
| | • ಕೃಷಿ ಸಂಬಂಧಿತ ಹಾಡನ್ನು ಕೇಳಿ ರಾಗವಾಗಿ ಹಾಡುವರು. | • ಪುಸ್ತಕದಲ್ಲಿ ಕೊಟ್ಟಿರುವ "ಅಮ್ಮಂಬಳ ಅನಂತಯ್ಯನಾವಡ" ರವರ ಪದ್ಯವನ್ನು ಹಾಡಲು ಮಕ್ಕಳಿಗೆ ಪ್ರೋತ್ಸಾಹಿಸುವುದು. ಅಥವಾ ಕೃಷಿ ಬೆಳೆ ಇತ್ಯಾದಿಗಳಿಗೆ ಸಂಬಂಧಿಸಿದ ಯಾವುದಾದರೂ ಹಾಡನ್ನು ಕೇಳಿಸಿ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿ ಉತ್ತರ ಹೇಳಲು ಮಕ್ಕಳಿಗೆ ಪ್ರೋತ್ಸಾಹಿಸುವುದು. | • ಪ್ರಸ್ತುತ ಪದ್ಯದಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯಲು ಕವಿ ಹೇಳಿದ್ದಾರೆ.<br>• ಯಾವ ಯಾವ ಹಣ್ಣುಗಳನ್ನು ಬೆಳೆಯಲು ಕವಿ ಹೇಳಿದ್ದಾರೆ? |
| | • ಚಿತ್ರನೋಡಿ ಮರ, ಗಿಡ, ಬೆಳೆಗಳ ಹೆಸರನ್ನು ಗುರ್ತಿಸುವರು. | • ಮೊಬೈಲ್ ಸಹಾಯದಿಂದ ಅಥವಾ ಚಾರ್ಟ್‌ಗಳನ್ನು ಬಳಸಿ ವಿವಿಧ ಚಟುವಟಿಕೆಗಳನ್ನು ವಿಶೇಷ ಹಾಗೂ ಚಿರಪರಿಚಿತ ಮರಗಿಡಗಳ ಚಿತ್ರ ತೋರಿಸಿ ಅವುಗಳನ್ನು ಹೆಸರಿಸಲು ತಿಳಿಸುವುದು. | • ತೆಂಗು, ಅಡಿಕೆ, ಕಾಫಿ, ಭತ್ತ, ರಾಗಿ, ಕಬ್ಬು ಇತ್ಯಾದಿ ಚಿತ್ರಗಳನ್ನು ಸಂಗ್ರಹಿಸಿ ಪಟ್ಟಿ ತಯಾರಿಸುವ ಯೋಜನೆ ನೀಡುವುದು. |
| | • ಶಿಕ್ಷಕರಿಂದ ಮಾದರಿ ವಾಚನ<br>. | • ಶಿಕ್ಷಕರು ಪದ್ಯಭಾಗವನ್ನು ಸೂಕ್ತ ಸ್ವರಭಾರದೊಂದಿಗೆ ಓದುವರು ಹಾಗೂ ಪಠ್ಯದಲ್ಲಿ ಬಳಕೆಯಾಗುವ ಕೆಲವು ಹೊಸಪದಗಳು ಕ್ಲಿಷ್ಟ ಪರಿಕಲ್ಪನೆಯ ಪದಗಳು, ಅಪರಿಚಿತ ಬೆಳೆಗಳು, ಸಸ್ಯಗಳ ಚಿತ್ರಗಳನ್ನು ಮೊಬೈಲ್ ಸಹಾಯದಿಂದ ತೋರಿಸುತ್ತಾ ಪಠ್ಯದ ಸರಳ ವಿವರಣೆಯೊಂದಿಗೆ ಮಕ್ಕಳಿಗೆ ಅರ್ಥೈಸುವುದು. | • ಅಭ್ಯಾಸದ ಪ್ರಶ್ನೆಗಳನ್ನು ಬಳಸುವುದು.<br>• ಕೊಟ್ಟಿರುವ ಪದಗಳಿಗೆ ಸ್ವಂತವಾಕ್ಯ ರಚಿಸಲು ತಿಳಿಸುವುದು.<br>ಉದಾ: ತೋಟ:____________ |

| | | | |
|---|---|---|---|
| | • ತಮ್ಮ ಮನೆಯಲ್ಲಿ ಬೆಳೆಯುವ ವಿವಿಧ ಬೆಳೆಗಳು ಹಾಗೂ ಬೆಳೆಯುವ ವಿಧಾನವನ್ನು ಕುರಿತು ಚರ್ಚಿಸುವರು | • ಮಕ್ಕಳು ತಮ್ಮ ಮನೆಯಲ್ಲಿ ಬೆಳೆಯುವ ವಿವಿಧ ಬೆಳೆಗಳನ್ನು ಪಟ್ಟಿಮಾಡಿ ಅವುಗಳಲ್ಲಿ ಯಾವುದಾದರೊಂದು ಬೆಳೆಯನ್ನು ಬೆಳೆಯುವ ಸಂಪೂರ್ಣ ವಿಧಾನವನ್ನು ಕುರಿತು ಹೇಳಿರುವ ವೀಡಿಯೋ ಮಾಡಿ ಶಿಕ್ಷಕರಿಗೆ ಕಳುಹಿಸಲು ಪ್ರೋತ್ಸಾಹಿಸುವುದು. | ಕಿರುಚು:______________<br>• ಶಾಲೆ ಪ್ರಾರಂಭವಾದರೆ ನೀನು ಯಾವ ಯಾವ ಗಿಡಗಳನ್ನು / ಬೆಳೆಗಳನ್ನು ಶಾಲಾ ಕೈತೋಟದಲ್ಲಿ ಬೆಳೆಯುವೆ ಪಟ್ಟಿಮಾಡು.<br>• ಪ್ರಮುಖ ಆಹಾರ ಧಾನ್ಯಗಳನ್ನು ಸಂಗ್ರಹಿಸಿ ಆಹಾರ ಧಾನ್ಯಗಳ ಚಾರ್ಟ್ ತಯಾರಿಸುವುದು. |

**(ಪ್ರಮುಖ ಕಲಿಕಾ ಸಾಮರ್ಥ್ಯ: ತರಗತಿಯಲ್ಲಿ ನಡೆಯುವ ಸರಳವಾದ ಮತ್ತು ವಿವಿಧ ಚರ್ಚೆಯಲ್ಲಿ ಭಾಗವಹಿಸುವರು)**

## ಆರಿಸಿದ ಭಾಗ: ಮಳೆ (ಪದ್ಯ)

(ಪ್ರಮುಖ ಕಲಿಕಾ ಸಾಮರ್ಥ್ಯ: ಪದ್ಯವನ್ನು ಓದಿದ ನಂತರ ಅದರಲ್ಲಿನ ವಿಚಾರಸರಣಿ ಮತ್ತು ಘಟನಾವಳಿಗೆ ಇರುವ ಸರಳ ಕಾರಣ ಸಂಬಂಧಗಳನ್ನು ಗುರುತಿಸುವುದು.)

| ತಿಂಗಳು | ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|
| ಸೆಪ್ಟೆಂಬರ್ 4ನೇ ವಾರ | • ಮಳೆಗೆ ಸಂಬಂಧಿಸಿದ ಪದ್ಯ ಆಲಿಸಿ ಹಾಡುವರು | • ಮಳೆಗೆ ಸಂಬಂಧಿಸಿದ ಯಾವುದಾದರೊಂದು ಗೀತೆಯ ಧ್ವನಿಸುರುಳಿ ಅಥವಾ ವೀಡಿಯೋ ತೋರಿಸುವುದು. ಜೊತೆಯಲ್ಲಿ ಹಾಡನ್ನು ಹಾಡಲು ತಿಳಿಸುವುದು. | • ಮಳೆಗೆ ಸಂಬಂಧಿಸಿದ ಪದ್ಯ ಸಂಗ್ರಹ ಮಾಡಲು ತಿಳಿಸುವುದು. |
| | • ಕಾಮನಬಿಲ್ಲಿನ ಚಿತ್ರ ಬರೆದು ಬಣ್ಣಗಳ ಬಗ್ಗೆ ತಿಳಿಯುವರು. | • ಕೇಳಿದ ಹಾಡಿಗೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.<br>• ಕಾಮನಬಿಲ್ಲಿನ ಚಿತ್ರ ತೋರಿಸಿ ಅಲ್ಲಿರುವ ಬಣ್ಣಗಳ ಬಗ್ಗೆ ತಿಳಿಸುವುದು ಹಾಗೂ ಕಾಮನಬಿಲ್ಲು ಯಾವಾಗ ಕಾಣುತ್ತದೆ ಎಂದು ತಿಳಿಸುವುದು. | • ಕಾಮನಬಿಲ್ಲಿನ ಚಿತ್ರ ಬರೆದು ಬಣ್ಣ ಹಾಕಲು ತಿಳಿಸುವುದು. |
| | • ಪದ್ಯವನ್ನು ರಾಗವಾಗಿ ಹಾಡುವರು | • ಶಿಕ್ಷಕರು ಪದ್ಯವನ್ನು ರಾಗವಾಗಿ ಹಾಡುವರು. ಮಕ್ಕಳು ಸಹ ರಾಗವಾಗಿ ಹಾಡಲು ಪ್ರೋತ್ಸಾಹ ನೀಡುವರು.<br>• ಯೂ–ಟ್ಯೂಬ್ ನಲ್ಲಿರುವ ಮಳೆ ಪದ್ಯದ ವೀಡಿಯೋ ಬಳಸಿ ಮಕ್ಕಳು ಮತ್ತಷ್ಟು ರಾಗವಾಗಿ ಹಾಡಲು ಪ್ರೋತ್ಸಾಹಿಸುವರು | |
| | • ಮಳೆ ಬರಲು ಪೂರಕವಾದ ಕಾರ್ಯಕಾರಣ ಸಂಬಂಧವನ್ನು ತಿಳಿಯುವರು. | • ಮಳೆಗೆ ಸಂಬಂಧಿಸಿದ ಚಿತ್ರಗಳು, ಮಳೆಯಿಂದಾಗುವ ಅನುಕೂಲ – ಅನಾನುಕೂಲಗಳು, ಮಳೆ ಬರುವ ಲಕ್ಷಣ, ಗುಡುಗು, ಮಿಂಚು, ಬಿರುಗಾಳಿ ಇತ್ಯಾದಿಗಳಿಗೆ ಸಂಬಂಧಿಸಿದ ಚಿತ್ರಗಳು, ವೀಡಿಯೋಗಳ ತುಣುಕುಗಳನ್ನು ತೋರಿಸಿ ಪದ್ಯದ ಸರಳ ವಿವರಣೆ ನೀಡುವುದು ಜೊತೆಯಲ್ಲಿ ಪದ್ಯದಲ್ಲಿ ಬರುವ ಪ್ರಾಸಪದಗಳು, ಜೋಡುನುಡಿಗಳು ಇತ್ಯಾದಿಗಳನ್ನು ಗಮನಿಸಲು ತಿಳಿಸುವುದು. | • ಪಠ್ಯಪುಸ್ತಕದಲ್ಲಿನ ಅಭ್ಯಾಸ |
| | • ಪ್ರಾಸಪದ ಹಾಗೂ ಸಮಾನಾರ್ಥಕ ಪದಗಳ ಬಗ್ಗೆ ತಿಳಿದು ಪ್ರಾಸಪದ ಗುರುತಿದುವರು, ಸಮಾನಾರ್ಥಕ ಪದ ಬರೆಯುವರು | ಪದ್ಯದಲ್ಲಿ ಬಳಕೆಯಾದ ಕೆಲವು ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಲು ಪ್ರೋತ್ಸಾಹಿಸುವುದು.<br>• ಜೋಡು ನುಡಿಗಳ ಬಗ್ಗೆ ತಿಳಿಸಿ ಪದ್ಯದಲ್ಲಿರುವ ಪದಗಳಿಗೆ ಹಾಗೂ ಇತರೆ ಕೆಲವು ಪದಗಳಿಗೆ ಜೋಡಿಪದ ಬರೆಯಲು ಪ್ರೇರಣೆ ನೀಡುವುದು. ಉದಾಹರಣೆ: ಕಾಡು–ಮೇಡು, ಬೆಟ್ಟ–ಗುಡ್ಡ, ಮಳೆ–ಬೆಳೆ ಇತ್ಯಾದಿ. | • ಸುಮೇರು ಭಾಗ–2ರ ಪುಟ ಸಂಖ್ಯೆ 14, 15, 16ನ್ನು ಬಳಸುವುದು.<br>• ಪದ್ಯದ ಪ್ರಾಸಪದ ಗುರ್ತಿಸಿ ಬರೆಯುವುದು.<br>• ಜೋಡುನುಡಿ ಪಟ್ಟಿ ತಯಾರಿಸಲು ತಿಳಿಸುವುದು. |

| | | | |
|---|---|---|---|
| | • ಜೋಡುನುಡಿ ಬರೆಯುವರು.<br><br>• ಚಿತ್ರ ನೋಡಿ ಪದ್ಯ / ಕವಿತೆ ರಚಿಸುವರು.<br><br>• ಕಾರಣ ತಿಳಿಸುವರು | • ಮಳೆಗೆ ಸಂಬಂಧಿಸಿದ ಮೋಡ, ಮಳೆ, ಮರ,ಗಿಡ, ಕೆರೆ ಇತ್ಯಾದಿಗಳಿರುವಚಿತ್ರ ಕೊಟ್ಟು ಸುಳಿವು ಪದಗಳ ಸಹಾಯದಿಂದ ಪದ್ಯ ರಚಿಸಲು ಪ್ರೇರೇಪಿಸುವುದು.<br><br>• ಮಳೆಯಿಂದಾಗುವ ಅನುಕೂಲ – ಅನಾನುಕೂಲಗಳು, ಅತೀ ಮಳೆಯಿಂದ ಉಂಟಾಗುವ ತೊಂದರೆಗಳು / ಅವಗಢಗಳ ಚಿತ್ರಗಳು / ವೀಡಿಯೋಗಳನ್ನು ತೋರಿಸಿ ಕೇಳುವ ಪ್ರಶ್ನೆಗಳಿಗೆ ಮಕ್ಕಳು ತಮ್ಮದೇ ಮಾತುಗಳಲ್ಲಿ ಉತ್ತರಿಸಲು ಪ್ರೋತ್ಸಾಹಿಸುವುದು.<br><br>• ಪ್ರಸ್ತುತ ಅತೀ ಮಳೆಯಿಂದ ಉಂಟಾಗಿರುವ ಅವಘಡಗಳನ್ನು ನೋಡಿರುವ ಮಕ್ಕಳಿಗೆ ಮಳೆ ಬಾರದಿದ್ದರೆ ಉಂಟಾಗುವ ಸಮಸ್ಯೆಗಳೇನು? ಎಂದು ಪ್ರಶ್ನಿಸಿ ಉತ್ತರಿಸಲು ಪ್ರೋತ್ಸಾಹಿಸುವುದು. ಸಂಬಂಧಿಸಿದಂತಹ ಚಿತ್ರ, ವೀಡಿಯೋ ಬಳಸಿ ಮಕ್ಕಳಿಂದ ಉತ್ತರ ಹೇಳಿಸುವುದು. | • ಮಕ್ಕಳು ಸ್ವಂತ ಚಿಕ್ಕಚಿಕ್ಕ ಪದ್ಯ ರಚನೆ ಮಾಡಲು ತಿಳಿಸುವುದು.<br><br>• ಅತಿವೃಷ್ಟಿಯಿಂದ ಉಂಟಾದ ಸಮಸ್ಯೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಲು ಯೋಜನೆ ನೀಡುವುದು.<br><br>• ಅನಾವೃಷ್ಟಿಯಿಂದಾಗುವ ದುಷ್ಪರಿಣಾಮಗಳನ್ನು ಪಟ್ಟಿ ಮಾಡಿಸುವುದು |

ಶಿಕ್ಷಕರಿಗೆ ಸೂಚನೆ:

* ಶಿಕ್ಷಕರು ಸ್ವತಃ ಪರಿಣಾಮಕಾರಿ ಚಟುವಟಿಕೆಗಳನ್ನು ಆಯೋಜಿಸಿಕೊಳ್ಳಲು ಸ್ವತಂತ್ರರು.

* ದೀಕ್ಷಾ ಆಪ್‌ನಲ್ಲಿ ದೊರೆಯುವ ಮೌಲ್ಯಮಾಪನ ಸಾಧನಗಳನ್ನು ಬಳಸಿಕೊಳ್ಳುವುದು.

* ಸುಮೇರು ಪುಸ್ತಕದಲ್ಲಿ ನೀಡಿರುವ ಚಟುವಟಿಕೆಗಳನ್ನು ನೀಡಬಹುದು.

## ಕಾರ್ಯ ಹಾಳೆ–1

## ವೀರಮಾತೆ ಜೀಜಾಬಾಯಿ

- **ಚಿತ್ರ ನೋಡಿ ನಿನಗನಿಸಿದುದನ್ನು ಐದಾರು ವಾಕ್ಯಗಳಲ್ಲಿ ಬರೆ:–**



- **ಕೆಳಗೆ ಕೊಟ್ಟಿರುವ ಪರಿಚ್ಛೇದಕ್ಕೆ ಲೇಖನ ಚಿಹ್ನೆ ಹಾಕಿ:–**

ಒಂದು ಆಲದ ಮರದಲ್ಲಿ ಕಾಗೆಯೊಂದು ವಾಸವಾಗಿತ್ತು. ಅದೇ ಮರಕ್ಕೆ ಕೋಗಿಲೆಯೊಂದು ನಿರಾಸೆಯಿಂದ ಬಂದು ಕುಳಿತುಕೊಂಡಿತು ಕೋಗಿಲೆಯನ್ನು ಕಂಡ ಕಾಗೆ ನೀನಾರು ನಿನ್ನ ಹೆಸರೇನು ನೋಡಲು ನನ್ನಂತೆಯೇ ಇರುವೆಯಲ್ಲಾ ಏಕಿಷ್ಟು ನಿರಾಸೆಯಿಂದಿರುವೆ ಕಾರಣವೇನು ಎಂದು ಕೇಳಿತು.

- **ಕೊಟ್ಟಿರುವ ಪದಗಳನ್ನು ಬಳಸಿ ಮಾದರಿಯಂತೆ ಅರ್ಥಪೂರ್ಣ ವಾಕ್ಯ ರಚಿಸಿ:–**

ಮಾದರಿ : ಶಿಲ್ಪಿಗಳು ವಿಗ್ರಹವನ್ನು ಕೆತ್ತಿದರು

| | | |
|---|---|---|
| ಶಿಲ್ಪಿಗಳು | ಪುಸ್ತಕವನ್ನು | ಕೆತ್ತಿದರು |
| ರೈತರು | ಹೊಲವನ್ನು | ಹಾಡಿದರು |
| ಮಕ್ಕಳು | ಹಾಡನ್ನು | ಓದಿದರು |
| ಗರುಗಳು | ವಿಗ್ರಹವನ್ನು | ಉತ್ತರು |

## ಕಾರ್ಯಹಾಳೆ – 2

## ಮಳೆ (ಪದ್ಯ)

**I. ಅಕ್ಷರಗಳನ್ನು ಜೋಡಿಸಿ ಅರ್ಥಪೂರ್ಣ ಪದ ರಚಿಸು:–**

**ಮಾದರಿ: ಕಕವಿಟವಿ – ವಿಕಟಕವಿ**

1) ರಸುರಸುರ – ____________
2) ಜೀನವನವ – ____________
3) ತಮರಾಸೀಟ್ಟಭ – __________

**II. ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ:–**

1) ಕೆರೆ, ಕಟ್ಟೆ, ಸಮುದ್ರ, ಸೂರ್ಯ – ____________
2) ಮಿಂಚು, ಭೂಮಿ, ಮಳೆ, ಗುಡುಗು – ___________
3) ಸರೋವರ, ಪರ್ವತ, ಬೆಟ್ಟ, ಗುಡ್ಡ – ____________
4) ನೊಗ, ಕುಂಟೆ, ನೇಗಿಲು, ಮಂಚ – ____________

**III. ಕಾಮನಬಿಲ್ಲಿನ ಅಂದವಾದ ಚಿತ್ರ ಬರೆದು ಸೂಕ್ತ ಬಣ್ಣ ಹಾಕು**

**IV. ಚಿತ್ರ ನೋಡಿ ಪದ್ಯ ರಚಿಸು**

ಸುಳಿವು ಪದಗಳು: ಮಳೆ, ಬೆಳೆ, ಬಿಸಿಲು, ನದಿ, ತಂಪು, ಧಗೆ, ಹರಿಯಿತು, ಮಿಂಚು, ಮೋಡ, ಇಳೆಗೆ, ಕವಿಯಿತು, ಇಳಿಯಿತು, ತುಂಬಿತು



# ಕಾರ್ಯಹಾಳೆ – 3
## ಅಜ್ಜಿಯ ತೋಟದಲ್ಲಿ ಒಂದು ದಿನ

**I. ಈ ಕೆಳಗಿನ ಪಟ್ಟಿಯಲ್ಲಿ ನೀಡಿರುವ ಅಕ್ಷರಗಳನ್ನು ಆರಿಸಿ ನೀರಿನ ಮೂಲಗಳನ್ನು ಕಂಡುಹಿಡಿಯಿರಿ.**

| | | | | | | |
|---|---|---|---|---|---|---|
| ಕೊ | ಳ | ತೊ | ಸು | ರಂ | ಗ | ಬಿ |
| ಳ | ಕೆ | ರೆ | ಸ | ರೋ | ವ | ರ |
| ವೆ | ಹೊ | ಳೆ | ಮು | ಹ | ಳ್ಳ | ತೆ |
| ಬಾ | ನ | ದಿ | ದ್ರ | ಕ | ಡ | ಲು |
| ವಿ | ಸಾ | ಗ | ರ | ಟ್ಯೆ | ಮ | ಳೆ |

______________ ______________
______________
______________ ______________ ______________
______________ ______________ ______________
______________ ______________ ______________
______________ ______________ ______________

**II. ಈ ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ:–**

ಉದಾ: ಒಂದು + ಆದ = ಒಂದಾದ

ಇಲ್ಲಿ + ಒಂದು = ______________

ಹೇರಳ + ಆಗಿ = ______________

ಹದ + ಆಗಿತ್ತು = ______________

**III. ನಿಮ್ಮ ಮನೆಯಲ್ಲಿ ಬೆಳೆಯುವ ಬೆಳೆಗಳನ್ನು ಪಟ್ಟಿ ಮಾಡು:–**

| |
|---|
| |

**IV. ನಿನಗೆ ಇಷ್ಟವಾದ ಯಾವುದಾದರೊಂದು ಬೆಳೆಯನ್ನು ಬೆಳೆಯುವ ವಿಧಾನದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.**

______________________________________________________________________

______________________________________________________________________

______________________________________________________________________

______________________________________________________________________